## ಶಿಕ್ಷಣವೆತ್ತ ಸಾಗುತ್ತಿದೆ?

ಚಿ॥ ಶಶಾಂಕ ಹತ್ವಾರ್

ಹರಿಹರಪುರದ ಪ್ರಬೋಧಿನೀ ಗುರುಕುಲದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಎಂಟನೇ ತರಗತಿಯ ಈ ಕಿರಿಯ ಲೇಖಕ ಶಿಕ್ಷಣವ್ಯವಸ್ಥೆಯನ್ನು ಕುರಿತು ಗಮನಾರ್ಹ ವಿಚಾರಗಳನ್ನು ಆಲೋಚಿಸಿದ್ದಾನೆ ಮತ್ತು ಅವುಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾನೆ.

ಯುವ ವೇದಿಕೆ

ತಮಸೋ ಮಾ ಜ್ಯೋತಿರ್ಗಮಯ

"ವಿದ್ಯೆಯುಳ್ಳವನಾ ಮುಖವು ಮುದ್ದು ಬರುವಂತಿಕ್ಕು" ಎಂದು ಸರ್ವಜ್ಞ ತನ್ನ ವಚನದಲ್ಲಿ ಹೇಳಿದ್ದಾನೆ. "ವಿದ್ಯೆ ಉಳ್ಳವನೇ ಶ್ರೇಷ್ಠ" ಎಂದು ಹಿಂದಿನ ಕಾಲದ ಋಷಿಗಳೂ ಇವರ ಬಗ್ಗೆ ಹೇಳಿದ್ದಾರೆ.

ಅನ್ನದಾನಂ ಪರಂ ದಾನಂ ವಿದ್ಯಾದಾನಮತಃ ಪರಃ ।
ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ಚ ವಿದ್ಯಯಾ ॥

ಇದರ ಅರ್ಥವೇನೆಂದರೆ, ಅನ್ನದಾನ ಶ್ರೇಷ್ಠವಾದುದು. ಆದರೆ, ವಿದ್ಯಾದಾನವು ಅದಕ್ಕಿಂತಲೂ ಶ್ರೇಷ್ಠವಾದುದು. ಅನ್ನದಿಂದ ಕ್ಷಣಿಕವಾದ ತೃಪ್ತಿ ಸಿಕ್ಕರೆ, ವಿದ್ಯೆಯಿಂದ ಜೀವನಪೂರ್ತಿ ತೃಪ್ತಿಯಿಂದ ಇರಬಹುದು ಎಂದು. ಹಾಗಾಗಿಯೇ ವಿದ್ಯೆ ಎಲ್ಲರಿಗೂ ಬೇಕು. ವಿದ್ಯೆ ಒಂದಿದ್ದರೆ ಸಾಕು, ವ್ಯಕ್ತಿಯು ಎಂತಹ ಸನ್ನಿವೇಶದಲ್ಲಿ ಬೇಕಾದರೂ, ಎಲ್ಲಿಯಾದರೂ ಬದುಕುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಈ ಕಾರಣಕ್ಕಾಗಿಯೇ ಹಿಂದಿನ ಕಾಲದಲ್ಲಿ ವಿದ್ಯೆಯನ್ನರಸಿ ಯಾರೇ ಬಂದರೂ, ಅವನ ಅರ್ಹತೆಯನ್ನು ಪರೀಕ್ಷಿಸಿ, ವಸತಿ, ಆಹಾರಗಳನ್ನೂ ಉಚಿತವಾಗಿಯೇ ನೀಡಿ, ಅವನು ಉತ್ತಮನಾಗಿ ಬಾಳುವುದಕ್ಕೆ ಅವಶ್ಯಕವಾದ ಶಿಕ್ಷಣವನ್ನು ಕೊಡುತ್ತಿದ್ದರು. ಗುರುಕುಲಗಳೆಂದರೆ ಸಾಮಾನ್ಯವಾಗಿ ಮನೆ ಅಥವಾ ಆಶ್ರಮವಾಗಿರುತ್ತಿತ್ತು. ಗುರುವು ಶಿಷ್ಯನ ಸಾಮರ್ಥ್ಯಕ್ಕನುಗುಣವಾಗಿ ವಿದ್ಯೆಯನ್ನು ನೀಡುತ್ತಿದ್ದನು. ತಮ್ಮ ಜೀವನಕ್ಕೆ ಉಪಯುಕ್ತವಾದ ವಿದ್ಯೆಯನ್ನೇ ಕಲಿಯುತ್ತಿದ್ದರಿಂದ, ಗುರುಕುಲ ಶಿಕ್ಷಣ ಮುಗಿಸಿದ ನಂತರ, ಕೆಲಸಕ್ಕಾಗಿ ಬೀದಿ, ಬೀದಿ ಅಲೆದಾಡುವ ಪರಿಸ್ಥಿತಿ ಅವರಿಗೆ ಬರುತ್ತಿರಲಿಲ್ಲ. ಈಗ ಪರಿಸ್ಥಿತಿ ಬೇರೆಯಾಗಿದೆ. ಈಗಿನ ಕಾಲಕ್ಕೆ ಉಪಯುಕ್ತವಾಗುವಂತೆ, ಮುಂದಿನ ಜೀವನವನ್ನು ಕೇಂದ್ರವಾಗಿರಿಸಿಕೊಂಡ ಶಿಕ್ಷಣ ದೊರೆಯಬೇಕು.

ವಿದ್ಯಾರ್ಥಿಗಳು, ಉಚಿತ ಶಿಕ್ಷಣವನ್ನು ಪಡೆಯುತ್ತಿದ್ದರಿಂದ ಅವರಿಗೆ ಸಮಾಜದ ಋಣ ತೀರಿಸುವ ಹೊಣೆ ಪ್ರಮುಖವಾಗಿರುತ್ತಿತ್ತು. ಹೀಗಾಗಿ ಗೃಹಸ್ಥರಾದಾಗ ದಾನ, ಧರ್ಮಗಳನ್ನು ಆಗಾಗ ಮಾಡುತ್ತಿದ್ದರು. ಇದರಿಂದ ಎಲ್ಲರಿಗೂ ತಂತಮ್ಮ ಹಕ್ಕು, ಬಾಧ್ಯತೆಗಳು ತಿಳಿದಿತ್ತು. ಇದರೊಂದಿಗೆ ಗುರು-ಶಿಷ್ಯರ ನಡುವೆ ಪ್ರೀತಿಯ ಬಾಂಧವ್ಯವೂ ಬೆಳೆಯುತ್ತಿತ್ತು. ಗುರುವಿಗೆ ಶಿಷ್ಯನ ಏಳ್ಗೆಯೇ ಪ್ರಮುಖವಾಗಿತ್ತು.

ಈಗ ಶಿಕ್ಷಣಕ್ಷೇತ್ರ ವಾಣಿಜ್ಯೀಕರಣವಾಗುತ್ತಿದೆ. ಎಲ್ಲೆಲ್ಲೂ 'ದುಡ್ಡು! ದುಡ್ಡು! ದುಡ್ಡು!' ಈಗಿನ ಕಾಲದಲ್ಲಿ ಪ್ರತಿಯೊಂದು ಕೆಲಸವೂ 'ಹೊನ್ನು, ಹೆಣ್ಣು, ಮಣ್ಣಿಗಾಗಿಯೇ' ನಡೆಯುತ್ತಿದೆ. ಪ್ರಾಚೀನ ಗುರುಕುಲಗಳಲ್ಲಿ 'ಆಹಾರ, ವಿದ್ಯೆ, ವಸತಿ' ಉಚಿತವಾಗಿದ್ದವು. ಈಗ ತುಂಬಾ ಲಾಭ ಪಡೆದುಕೊಳ್ಳಬಹುದಾದ ಉದ್ಯಮವೆಂದರೆ ಶಿಕ್ಷಣಕ್ಷೇತ್ರ ಎನ್ನುವಂತಾಗಿದೆ. ಏಕೆಂದರೆ, ಯಾವುದೇ ಶಾಲೆಗಳಲ್ಲಿ (ಸರ್ಕಾರಿ ಶಾಲೆ ಬಿಟ್ಟು) ತಿಂಗಳಿಗೆ ಶುಲ್ಕ ನೂರಾರುಗಟ್ಟಲೆ ಇರುತ್ತದೆ. ಇನ್ನು ಡೊನೇಷನ್ ಅಂತೂ ಸಾವಿರಾರುಗಟ್ಟಲೆ.

ವಿದ್ಯೆಯನ್ನೂ ಮಾರುವಂತಹ ದುಃಸ್ಥಿತಿ ನಮಗೊದಗಿದೆ. ಇದಕ್ಕೆ ಕಾರಣ ಮೆಕಾಲೆಯ ಶಿಕ್ಷಣ ಪದ್ಧತಿ. ಹೊರದೇಶದ ಒಬ್ಬ ವ್ಯಕ್ತಿ ಬಂದು, ವಿದೇಶೀ ಶಿಕ್ಷಣ ಪದ್ಧತಿಯನ್ನು ಆರಂಭಿಸಿದಾಗ, ನಾವು ವಿವೇಚನೆಯಿಲ್ಲದೆ ಉದಾತ್ತವಾದ, ಶ್ರೇಷ್ಠವಾದ, ಉತ್ಕೃಷ್ಟವಾದ ಹಿಂದೂ ಸಂಸ್ಕೃತಿಯ ವಿದ್ಯೆಯನ್ನೇಕೆ ಕೈಬಿಟ್ಟೆವು? ಪ್ರಸ್ತುತ ಶಿಕ್ಷಣ ಕೇವಲ ಮಾಹಿತಿ ಸಂಗ್ರಹಕ್ಕೆ ಮಾತ್ರ ಎಂಬಂತಾಗಿದೆ. ಪರೀಕ್ಷೆಗಳಲ್ಲಿ ಪಾಸಾದರೆ ಸಾಕು, ಅವನು ವಿದ್ಯಾವಂತನೆನಿಸಿಕೊಳ್ಳುತ್ತಾನೆ. ಶಿಕ್ಷಣದಲ್ಲಿ ಸಹಕಾರದ ಬದಲು ಸ್ಪರ್ಧೆ, ಅದರಿಂದ ಸಂಘರ್ಷ ಎದ್ದು ಕಾಣುತ್ತಿದೆ. ಶಿಕ್ಷಣವೆಂದರೆ ವಿಶ್ವವಿದ್ಯಾನಿಲಯಗಳು ನೀಡುವ 'ಮಾರ್ಕ್ಸ್ ಕಾರ್ಡ್' ಪಡೆದು ಕೆಲಸ ಗಿಟ್ಟಿಸಿಕೊಳ್ಳುವುದು. ಪ್ರಾಚೀನ ಕಾಲದ ಶಿಕ್ಷಣದಲ್ಲಿ ಧರ್ಮ, ಮೌಲ್ಯಗಳು, ನೈತಿಕತೆ, ವಿಧೇಯತೆ, ಶಿಸ್ತುಗಳು ಪ್ರಧಾನವಾಗಿದ್ದವು. ಆದರೆ ಪ್ರಚಲಿತ ಶಿಕ್ಷಣದಲ್ಲಿ ಅರ್ಥ ಮತ್ತು ಕಾಮಗಳು ಪ್ರಧಾನವಾಗಿವೆ. ಇದರ ಬಗ್ಗೆ ಒಂದು ಶ್ಲೋಕವಿದೆ.

**ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ ।**
**ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಂ ॥**

ವಿದ್ಯೆಯನ್ನು ಚೆನ್ನಾಗಿ ಶ್ರದ್ಧೆಯಿಂದ ಕಲಿತರೆ, ವಿನಯವು ಲಭಿಸುತ್ತದೆ. ವಿನಯವನ್ನು ಸದುಪಯೋಗ ಮಾಡಿಕೊಂಡಾಗ ಯೋಗ್ಯತೆಯೂ, ಯೋಗ್ಯತೆಯಿಂದ ಸ್ವಾಭಾವಿಕವಾಗಿಯೇ ಧನವೂ ಲಭಿಸುತ್ತದೆ. ಹಾಗೆ ಲಭಿಸಿದ ಧನದಿಂದ ದಾನ, ಧರ್ಮಗಳನ್ನು ಮಾಡಿಕೊಂಡು ಬದುಕತೊಡಗಿದರೆ, ವ್ಯಕ್ತಿಯ ಜೀವನ ಸುಖಮಯವಾಗುತ್ತದೆ.

ಯಾವಾಗ ವಸ್ತುವಿನ ಬೇಡಿಕೆ ಹೆಚ್ಚಾಗುತ್ತದೆಯೋ, ಆಗ ವಸ್ತುವಿನ ಬೆಲೆಯೂ ಹೆಚ್ಚಾಗುತ್ತದೆ. ಹಾಗೆಯೇ, ಇಂದು ಅಧಿಕ ಹಣ ತರುವ ಕಂಪ್ಯೂಟರ್, ಇಂಜಿನಿಯರಿಂಗ್, ಮೆಡಿಕಲ್ ಕ್ಷೇತ್ರಗಳಿಗೆ ಬಹಳ ಬೇಡಿಕೆ ಇದೆ. ಆದ್ದರಿಂದಲೇ ಮಕ್ಕಳ ತಂದೆತಾಯಿಗಳು ಎಷ್ಟೇ ಹಣ ಖರ್ಚಾದರೂ ಸರಿ, ತಮ್ಮ ಮಕ್ಕಳಿಗೆ ಈ ಕ್ಷೇತ್ರದಲ್ಲಿ ಉನ್ನತ ಶಿಕ್ಷಣವನ್ನು ಕೊಡಿಸಲೇ ಬೇಕೆಂದು ಚಿಂತಿಸುತ್ತಾರೆ. ಈ ಕ್ಷೇತ್ರದಲ್ಲಿ ಶಿಕ್ಷಣ ಪಡೆದು ಹೊರ ಬಂದ ತಂತ್ರಜ್ಞರು, ವೈದ್ಯರು ತಮ್ಮ ಬಂಡವಾಳವನ್ನು ಚಕ್ರಬಡ್ಡಿ ಸಮೇತ ಈ ಸಮಾಜದಿಂದ ಪಡೆಯಲು ಕಾತರರಾಗಿರುತ್ತಾರೆ. ಈ ಕಾರಣದಿಂದಾಗಿ ಭಾರತದೇಶ ಲಂಚ ಸ್ವೀಕರಿಸುವ ದೇಶಗಳ ಪಟ್ಟಿಯಲ್ಲಿ ಮೊದಲನೇ ಸ್ಥಾನಕ್ಕಾಗಿ ಕಸರತ್ತು ಮಾಡುತ್ತಿದೆ! ಎಲ್ಲಾ ಕ್ಷೇತ್ರಗಳೂ ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿವೆ. ರಾಜಕೀಯ ಅಸಹನೀಯವಾಗಿದೆ. ಅದಕ್ಕೆ ಪರಿಹಾರವನ್ನು ಹುಡುಕಲೇಬೇಕಾಗಿದೆ. ಪರಿಹಾರವೂ ಸರಳ. ವಿದ್ಯಾರ್ಥಿಯಲ್ಲಿ ಹುದುಗಿರುವ ಸುಪ್ತ ಚೇತನವನ್ನು ಜಾಗೃತಗೊಳಿಸಬಲ್ಲ ಶಿಕ್ಷಣವನ್ನು ಸೂಕ್ತ ವಾತಾವರಣದೊಂದಿಗೆ ಸಂಸ್ಕೃತಿಯನ್ನು ನೀಡುವ ಚಟುವಟಿಕೆಗಳ ಮೂಲಕ ನೀಡಬೇಕು. ನೈತಿಕತೆ, ಸ್ವತಂತ್ರವಾಗಿ ಆಲೋಚಿಸುವ ಸಾಮರ್ಥ್ಯ, ಎಲ್ಲರೊಂದಿಗೆ ಸಾಮರಸ್ಯದಿಂದ ಬಾಳುವ ಕಲೆ ಹಾಗೂ ಸೇವಾಭಾವನೆಯನ್ನು ಪಠ್ಯಕ್ರಮದಲ್ಲೇ ಅಳವಡಿಸಬೇಕು. ಇಂತಹ ಪ್ರಯೋಗವನ್ನು ಒಳಗೊಂಡಿರುವ ಮೂರು ಗುರುಕುಲಗಳು ನಮ್ಮ ಕರ್ನಾಟಕದಲ್ಲಿ ಇವೆ. ಇದೇ ರೀತಿ ಇನ್ನೂ ಹಲವು ಗುರುಕುಲಗಳಾಗಿ ಮೆಕಾಲೆ ಶಿಕ್ಷಣವನ್ನು ಸಮಾಜವೇ ಕಿತ್ತು ಬಿಸಾಡುವಂತೆ ಆಗಬೇಕು. ಇದು ಕಷ್ಟದ ಕೆಲಸ ಎಂದು ನೀವು ಹೇಳಬಹುದು. ಆದರೆ, ಕಂಪ್ಯೂಟರ್‌ಗಳಂತಹ ತಂತ್ರಜ್ಞಾನವನ್ನು ಆವಿಷ್ಕರಿಸಿದ ಮನುಷ್ಯನಿಗೆ, ಈ ಕೆಲಸವೇನೂ ದೊಡ್ಡದಲ್ಲ. ಇದೇ ರೀತಿ ಭಾರತದಲ್ಲೆಲ್ಲಾ ಗುರುಕುಲಗಳ ಸ್ಥಾಪನೆಯಾದರೆ, ನಮ್ಮ ಭಾರತಮಾತೆ ಪುನಃ ಜಗಜ್ಜನನಿಯಾಗುವುದರೊಂದಿಗೆ, ಜಗತ್ತಿಗೆ ಬೆಳಕನ್ನು ನೀಡುವುದರಲ್ಲೂ ಸಂಶಯವಿಲ್ಲ. ಹೀಗಾಗಿ ನೀವು ಚಿಂತಿಸಿ: ನಾವು ಅಸಂಸ್ಕೃತರಾಗಬೇಕೆ ಅಥವಾ ಸುಸಂಸ್ಕೃತರಾಗಬೇಕೆ? ನಮಗೆ ಮೆಕಾಲೆ ಶಿಕ್ಷಣ ಬೇಕೆ ಅಥವಾ ನಮ್ಮ ಹಿಂದೂ ಪರಂಪರೆಯ ಶ್ರೇಷ್ಠ, ಉದಾತ್ತ ಶಿಕ್ಷಣ ಬೇಕೇ? ✪

# ? ಕೇಳಿ ತಿಳಿಯಿರಿ ☆

(ಯುವಕರ ಪ್ರಶ್ನೆಗಳಿಗೆ ರಾಷ್ಟ್ರಪತಿಗಳು ನೀಡಿದ ಉತ್ತರ)

(ಭಾರತದ ರಾಷ್ಟ್ರಪತಿಗಳಾದ ಡಾ. ಅಬ್ದುಲ್ ಕಲಾಂ ಅವರು ಜನವರಿ ೧೨ರಂದು ಪೋರ್‌ಬಂದರಿನ ರಾಮಕೃಷ್ಣ ಮಿಷನ್ ಏರ್ಪಡಿಸಿದ್ದ ರಾಷ್ಟ್ರೀಯ ಯುವ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ, ಅವರು "ಸ್ವಾಮಿ ವಿವೇಕಾನಂದರ ಸಂದೇಶಗಳು ಆಧುನಿಕ ಯುವಕರಿಗೆ ತುಂಬ ಆವಶ್ಯಕವಾಗಿವೆ; ಅವು ಅವರನ್ನು ಸ್ಫೂರ್ತಿಭರಿತರನ್ನಾಗಿ ಮಾಡುತ್ತವೆ" ಎಂದು ಹೇಳಿದರು. ಸುಮಾರು ೫,೦೦೦ ಯುವಕರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಯುವಕರ ಪ್ರಶ್ನೆಗಳಿಗೆ ಮಾನ್ಯ ರಾಷ್ಟ್ರಪತಿಗಳು ನೀಡಿದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ)

? ಈ ಜಗತ್ತಿನಲ್ಲೇ ಅತ್ಯುತ್ತಮ ರಾಷ್ಟ್ರವನ್ನಾಗಿ ಮಾಡಲು ನಾವು ಭಾರತಕ್ಕಾಗಿ ಏನು ಮಾಡಬಲ್ಲೆವು? ಇದರ ಬಗ್ಗೆ ನೀವು ನಮ್ಮಿಂದ ಏನು ಬಯಸುತ್ತೀರಿ?

☆ **೧. ನಿನ್ನ ಅಧ್ಯಯನದಲ್ಲಿ ಅತ್ಯುತ್ತಮನಾಗು. ಗುರಿಯನ್ನು ನಿರ್ಧರಿಸಿಕೊಂಡು ಅದನ್ನು ಸಾಧಿಸಲು ಶ್ರಮವಹಿಸು.**

**೨. ಐದು ಜನ ಅನಕ್ಷರಸ್ಥರಿಗೆ ಓದು ಬರಹ ಹೇಳಿಕೊಡು.**

**೩. ಐದು ಮರಗಳನ್ನು ನೆಟ್ಟು, ಅವುಗಳಿಗೆ ನೀರು ಹಾಕಿ ಪೋಷಿಸು.**

**೪. ಶಕ್ತಿಯನ್ನು ಸಂರಕ್ಷಿಸು, ಅಪವ್ಯಯವಾಗದಂತೆ ನೋಡಿಕೋ.**

**೫. ಇತರ ವಿದ್ಯಾರ್ಥಿಗಳೊಂದಿಗೆ ಒಗ್ಗೂಡಿ ನಿಮ್ಮ ಪರಿಸರವನ್ನು ಶುಭ್ರವಾಗಿಡಲು ಒಂದು ಕಾರ್ಯಕ್ರಮ ಹಮ್ಮಿಕೋ.**

? ನಮ್ಮ ದೇಶದ ಈಗಿನ ಶಿಕ್ಷಣ ಪದ್ಧತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?